ಶ್ರೀ ಬಸವರಾಜ್ ಪಾಟೀಲ್ ಯತ್ನಾಳ್:— ಮಾನ್ಯ ಅಧ್ಯಕ್ಷರೆ, ಈ ಬಾಗಲಕೋಟೆ-ಹುಬ್ಬಳ್ಳಿ ರಸ್ತೆಯಲ್ಲಿ ಬೆಣ್ಣೆಹಳ್ಳ ಎಂಬ ದೊಡ್ಡದಾದ ಹಳ್ಳ ಇದೆ. ಇದರ ಬಗ್ಗೆ ಮಾನ್ಯ ಸಚಿವರಿಗೂ ತಿಳುವಳಿಕೆ ಇರಬಹುದು. ಅನೇಕ ಸಲ ಮಳೆ ಹೆಚ್ಚಾದಾಗ ಒಂದೊಂದು ದಿವಸ ಆ ಹಳ್ಳವನ್ನು ದಾಟಲು ಆಗುವುದಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಈ ಹಳ್ಳಕ್ಕೆ ಸೇತುವೆ ಕಟ್ಟುವ ಕೆಲಸವನ್ನು ಸರ್ಕಾರ ಈ ಯೋಜನೆಯಲ್ಲಿ ಹಾಕಿಕೊಂಡಿದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:— ಮಾನ್ಯ ಅಧ್ಯಕ್ಷರ, ವಿಶ್ವ ಬ್ಯಾಂಕ್ ಯೋಜನೆಯ ಅಡಿಯಲ್ಲಿ ಬಾಗಲಕೋಟೆ-ಹುಬ್ಬಳ್ಳಿ ನಡುವಿನ 124 ಕಿಲೋಮೀಟರ್ ರಸ್ತೆಯನ್ನು ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಬರುವ ಸೇತುವೆಗಳಿರಲಿ, ರಸ್ತೆ ಆಗಲ ಮಾಡುವುದಿರಲಿ, ಸಿಟಿ ಲಿಮಿಟ್ ಬಂದಿದ್ದರೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಆಗಲ ಮಾಡುವ ಈ ಎಲ್ಲಾ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:— ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):— ಮಾನ್ಯ ಅಧ್ಯಕ್ಷರೆ, 24ರ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಶಾಸಕರ ಅನುದಾನದಲ್ಲಿ ನಡೆದ ಕಾಮಗಾರಿ.

1581(2281) ಶ್ರೀ ಆಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ):— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಅನುದಾನದಲ್ಲಿ ಹುಬ್ಬಳ್ಳಿ ನಗರಕ್ಕೆ ಕಳೆದ ಐದು ವರ್ಷಗಳಿಂದ ಯಾವಯಾವ ಕಾಮಗಾರಿಗಳಿಗೆ ಇಲ್ಲಿಯವರೆಗೆ ಒಟ್ಟು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಪ್ರತಿ ವರ್ಷದ ಸಂಪೂರ್ಣ ವಿವರ ನೀಡುವುದು);

ಆ) ಬಾಕಿ ಉಳಿದಿರುವ ಅನುದಾನ ಎಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು):—

ಅ) ಶಾಸಕರ ಅನುದಾನದಲ್ಲಿ ಹುಬ್ಬಳ್ಳಿ ನಗರಕ್ಕೆ ಕಳೆದ ಐದು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಬಾಕಿ ಉಳಿದ ಅನುದಾನ ಯಾವುದು ಇರುವುದಿಲ್ಲ.

ಅನುಬಂಧ

ಕ್ರ. ಸಂ.	ಕೆಲಸದ ವಿವರ	ಅಂದಾಜು ಮೊತ್ತ	ಬಿಡುಗಡೆ ಮಾಡಲಾದ ಅನುದಾನ 96-97	97-98	98-99	99-2000	ಒಟ್ಟು ಅನುದಾನ	ಒಟ್ಟು ಖರ್ಚು
	ಹುಬ್ಬಳ್ಳಿ ಶಹರ ಮತ ಕ್ಷೇತ್ರ							
1.	ಕಾರವಾರ-ಬಳ್ಳಾರಿ ರಸ್ತೆಯ ಕಿಮೀ. ಕಿಮೀ.132.40 ರಿಂದ 133.30 ರವರೆಗೆ ಬಿ.ಯು.ಎಸ್.ಬಿ. ಮರು ದಾಂಬರೀಕರಣ.	12.00	3.88	6.48	3.95	0.35	13.66	11.83
2.	ಕಾರವಾರ-ಬಳ್ಳಾರಿ ರಸ್ತೆಯ ಕಿಮೀ.132.40 ರಿಂದ 132.80 ರವರೆಗೆ ರಸ್ತೆಯ ಒಂದು ಬದಿಗೆ ಮೋರಿ ನಿರ್ಮಾಣ ಹಾಗೂ ಸುಧಾರಣೆ.	6.00	2.00	2.40	--	--	4.40	6.46
3.	ಕಾರವಾರ-ಬಳ್ಳಾರಿ ರಸ್ತೆಯ ಕಿಮೀ.133.00 ರಿಂದ 133.30 ರವರೆಗೆ ರಸ್ತೆಯ ಒಂದು ಬದಿಗೆ ಮೋರಿ ನಿರ್ಮಾಣ ಹಾಗೂ 3 ಸಿ.ಡಿ ಯನ್ನು ನಿರ್ಮಿಸುವುದು. ಹಾಗೂ ಸುಧಾರಣೆ.	7.00	2.00	3.20	--	--	5.20	7.43
3.	ಕಾರವಾರ-ಬಳ್ಳಾರಿ ರಸ್ತೆಯ ಕಿಮೀ.130.50 ಒಂದು ಬದಿಗೆ ಮೋರಿ ಹಾಗೂ ಸಿ.ಡಿ ನಿರ್ಮಾಣದ ಕೆಲಸ.	5.00	1.50	2.42	--	--	3.93	5.01
	ಒಟ್ಟು	30.00	9.38	14.50	2.95	0.35	27.18	30.73